ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ

ದಿನಾಂಕ : DATE : 30/09/201


# ಇಲಾಖಾ ಚೀಫ್ ಎಂಜಿನಿಯರ್‌ಗಳ ಸೌಲಭ್ಯಕ್ಕೆ ಕತ್ತರಿ

■ **ಶಶಿಧರ ಹೆಗಡೆ** ಬೆಂಗಳೂರು ವಿ.ಕ. 30/9/19

ಬಡ್ತಿ ಮೀಸಲು ಪ್ರಕರಣ ವಿಚಾರದಲ್ಲಿ ತನ್ನದೇ ಮಾರ್ಗಸೂಚಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಉಲ್ಲಂಘಿಸಿರುವ ಅಂಶ ಬೆಳಕಿಗೆ ಬಂದಿದೆ.

ಇದರಿಂದ ಲೋಕೋಪಯೋಗಿ ಸೇರಿದಂತೆ ನಾನಾ ಇಲಾಖೆಗಳಲ್ಲಿ ಕರ್ತವ್ಯದಲ್ಲಿರುವ ಎಂಜಿನಿಯರ್‌ಗಳ ಸೌಕರ್ಯಕ್ಕೆ ಕತ್ತರಿ ಬಿದ್ದಿದೆ. ಜತೆಗೆ ನಿವೃತ್ತರಿಗೂ ಅನ್ಯಾಯವಾಗಲಿದೆ.

ಬಿ.ಕೆ.ಪವಿತ್ರ ಪ್ರಕರಣದ ಅನುಸಾರ ಬಡ್ತಿ ಪ್ರಕ್ರಿಯೆ ಸಮರ್ಪಕಗೊಳಿಸಲು ಡಿಪಿಎಆರ್‌ನಿಂದಲೇ ವಿಸ್ತೃತ ಮಾರ್ಗ ಸೂಚಿ ಹೊರಡಿಸಲಾಗಿದೆ. ಅದರಂತೆ ಅರ್ಹತೆ ಹಾಗೂ ಜ್ಯೇಷ್ಠತೆಯಡಿ ಪೂರ್ವಾನ್ವಯವಾ ಗುವಂತೆ ಮುಂಬಡ್ತಿ ನೀಡಬೇಕು. ಬಹುತೇಕ ಇಲಾಖೆಗಳ ಪ್ರಮೋಷನ್ ವೇಳೆ ಈ ಸೂಚನೆ ಪಾಲಿಸಲಾಗಿದೆ. ಆದರೆ, ಮುಖ್ಯ ಎಂಜಿನಿಯರ್‌ಗಳ ಬಡ್ತಿಯಲ್ಲಿ ಡಿಪಿಎಆರ್ ಎಡವಿದೆ.

ಬಡ್ತಿ ಮೀಸಲು ಪ್ರಕರಣದಲ್ಲಿ 2017ರ ಫೆಬ್ರವರಿ 9ರಂದು ತೀರ್ಪು ಬಂದ ಬಳಿಕ ಜ್ಯೇಷ್ಠತಾ ಪಟ್ಟಿ ಸಂಬಂಧ ಡಿಪಿಎಆರ್‌ನಿಂದ 2018ರ ಮಾರ್ಚ್ 12ರಂದು ಆದೇಶ ಹೊರಡಿಸಲಾಗಿತ್ತು. ಇದರಲ್ಲಿಯೂ ಮುಖ್ಯ ಎಂಜಿನಿಯರ್‌ಗಳಿಗೆ ಪೂರ್ವಾನ್ವಯವಾಗುವಂತೆ ಮುಂಬಡ್ತಿ ಕಲ್ಪಿಸಬೇಕೆಂದಿದೆ. ಈ ಮಧ್ಯೆ ಬಿ.ಕೆ.ಪವಿತ್ರ ಪ್ರಕರಣದ ಪರಿಷ್ಕೃತ ತೀರ್ಪು ಬಂದ ನಂತರ 2019ರ ಸೆ. 6ರಂದು ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ ಪ್ರಕಟಿಸಲಾಗಿದೆ. ಇದರಲ್ಲಿ 2018ರ ಮೇ 31ರಿಂದ ಅನ್ವಯವಾಗುವಂತೆ ಬಡ್ತಿ ಕ್ರಮಬದ್ಧಗೊಳಿಸಲು ನಿರ್ದೇಶಿಸಲಾಗಿದೆ. ಹಾಗಾಗಿ ಈ ಮುಖ್ಯ ಎಂಜಿನಿಯರ್‌ಗಳಿಗೆ 11 ವರ್ಷದ ಅವಧಿಯ ಬಾಕಿ ವೇತನ ಹಾಗೂ ಇನ್ನಿತರ ಸೌಲಭ್ಯ ಕಡಿತಗೊಳ್ಳಲಿದೆ. ನಿವೃತ್ತರ ಪಿಂಚಣಿಗೂ ಕೊಕ್ಕೆ ಬೀಳಲಿದೆ.

**ನಿಯಮವೇನು ಹೇಳುತ್ತದೆ?:** ಯಾವುದೇ ಅಧಿಕಾರಿಗೆ ರೂಲ್ 32 ಅಡಿ ಪ್ರಭಾರ ಬಡ್ತಿ ನೀಡಿದ 6 ತಿಂಗಳ ಒಳಗೆ ಅದನ್ನು ಕ್ರಮಬದ್ಧಗೊಳಿಸಬೇಕು. ಅಂದರೆ ರೆಗ್ಯೂಲರ್ ಬಡ್ತಿ ನೀಡಬೇಕು. ಜತೆಗೆ ಇದು ರೂಲ್ 32 ಪ್ರಕಾರ ಪ್ರಭಾರ ಬಡ್ತಿ ಹೊಂದಿದ




ದಿನದಿಂದ ಜಾರಿಯಾಗುವಂತೆ ಪೂರ್ವಾನ್ವಯ ಆದೇಶವಾಗಿರಬೇಕು. ರಾಜ್ಯ ನಾಗರಿಕ ಸೇವಾ ನಿಯಮವೂ (ಆರ್‌ಪಿಪಿ) ಇದನ್ನೇ ಹೇಳುತ್ತದೆ. ಆದರೆ, ರಾಜ್ಯದಲ್ಲಿ ಮೀಸಲಿನಡಿ ಬಡ್ತಿ ನೀಡಿದ ಪ್ರಕರಣ ಬಹಳ ವರ್ಷದಿಂದಲೂ ಇತ್ಯರ್ಥವಾಗದೇ ಇರುವುದರಿಂದ ರೂಲ್ 32ಗೆ (ಪ್ರಭಾರ ಬಡ್ತಿಯಲ್ಲೇ ಮುಂದುವರಿಸುವುದು) ಜೋತು ಬೀಳುವುದು ಅನಿವಾರ್ಯವಾಗಿತ್ತು. ಪವಿತ್ರ ಪ್ರಕರಣದ ಅಂತಿಮ ಆದೇಶ ಇದನ್ನು ಸರಿಪಡಿಸಲು ಅನುವು ಮಾಡಿಕೊಟ್ಟಿದೆ. ಆದರೆ, ಚೀಫ್ ಎಂಜಿನಿಯರ್‌ಗಳಿಗೆ ಬಡ್ತಿ ನೀಡುವಾಗ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯೇ ಗೊಂದಲ ಸೃಷ್ಟಿಸಿದೆ.

ಪ್ರಭಾರ ಬಡ್ತಿ ನೀಡಿದ ದಿನಾಂಕದಿಂದಲೇ ಅನ್ವಯವಾಗುವಂತೆ ರೆಗ್ಯೂಲರ್ ಬಡ್ತಿ ನೀಡಬೇಕೆಂದು ಕೆಎಟಿ ಆದೇಶದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ರುದ್ರಯ್ಯ ಪ್ರಕರಣದಲ್ಲಿ ಸರಕಾರಕ್ಕೆ ಕೆಎಟಿ ಇದೇ ಸೂಚನೆ ನೀಡಿದೆ. ಇನ್ನು ಈ ಸಂಬಂಧದಲ್ಲಿ ಸುಪ್ರೀಂಕೋರ್ಟ್, ಹೈಕೋರ್ಟ್‌ನ ನಿರ್ದೇಶನಗಳೂ ಇವೆ. ಆದರೆ, ಈ ಎಲ್ಲವನ್ನೂ ಡಿಪಿಎಆರ್ ಗಾಳಿಗೆ ತೂರಿದೆಯೆಂದು ಎಂಜಿನಿಯರ್‌ಗಳು ಆರೋಪಿಸುತ್ತಿದ್ದಾರೆ. ಈ ಅನ್ಯಾಯ ಸರಿಪಡಿಸುವಂತೆ ಎಸ್‌ಸಿ, ಎಸ್‌ಟಿಗಳೂ ಸೇರಿದಂತೆ ಒಬಿಸಿ, ಸಾಮಾನ್ಯ ವರ್ಗದ ಎಂಜಿನಿಯರ್‌ಗಳು ಸರಕಾರಕ್ಕೆ ಪತ್ರ ಬರೆದಿದ್ದಾರೆ. ನಿವೃತ್ತ ಮುಖ್ಯ ಎಂಜಿನಿಯರ್‌ಗಳೂ ಸರಕಾರದ ಮೊರೆ ಹೋಗಿದ್ದಾರೆ.

1